3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ
ನ್ಯಾಯಾಲಯ, ಕಡೂರು.

**<u>ಸಿ.ಸಿ.ನಂ.2702/2021</u>**

<u>ಪಿರ್ಯಾದುದಾರರು</u> ಃ ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ದ-

<u>ಆರೋಪಿತರು</u> ಃ ಆ 1- ಜೆ. ಎಂ. ಬಸವರಾಜು ಬಿನ್ ಮಲ್ಲೇಶಪ್ಪ, 25 ವರ್ಷ, ಶ್ರೀರಾಮ್ ಫೈನಾನ್ಸ್ ತರೀಕೆರೆ, ವಾಸ- ಜೆಗಣೇಹಳ್ಳಿ, ಕಡೂರು ತಾಲ್ಲೂಕು.

<u>-ಃಆಪಾದನೆಃ-</u>

ದಿನಾಂಕಃ 23.11.2020 ರಂದು ರಾತ್ರಿ 9.30 ರ ಸಮಯದಲ್ಲಿ ಬೀರೂರು ಠಾಣಾ ವ್ಯಾಪ್ತಿ ಅಜ್ಜಂಪುರ ಕಡೆಗೆ ಹೋಗುವ ಇಂಗ್ಲಾರನಹಳ್ಳಿ ಗೇಟ್ ಸಮಿಪಾ ಮೃತ ಗಣೇಶ್ ಪ್ರಸಾದ್ ಕೆಎ- 18/ಇಸಿ-9243 ರ ಸ್ಟಾರ್ ಸಿಟಿ ಬೈಕಿನಲ್ಲಿ ಹೋಗುತ್ತಿರುವಾಗ ಅಜ್ಜಂಪುರ ಕಡೆಯಿಂದ 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ 41-ಇಲ್ -6391 ಸಿಟಿ 100 ಪ್ಲಾಟಿನ ಬೈಕನ್ನು ಸಾರ್ವಜನಿಕ ರಸ್ತೆಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಹಾಗೂ ನಿರ್ಲಕ್ಷ್ಯತನದಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಗಣೇಶ್ ಪ್ರಸಾದ್ ರವರು ಚಲಾಯಿಸುತ್ತಿದ್ದ ಕೆಎ- 18/ಇಸಿ-9243 ರ ಬೈಕಿಗೆ ಡಿಕ್ಕಿ ಪಡಿಸಿ ಅಪಘಾತವನ್ನುಂಟು ಮಾಡಿದ್ದೀರಿ. ಆದ್ದರಿಂದ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು 1 ನೇ ನೀವು ಆರೋಪಿಯಾದ ನೀವು ಕೆಎ 41-ಇಲ್ -6391 ಸಿಟಿ 100 ಪ್ಲಾಟಿನ ಬೈಕನ್ನು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಹೋಗಿ ಗಣೇಶ್ ಪ್ರಸಾದ್ ರವರು ಚಲಾಯಿಸುತ್ತಿದ್ದ ಕೆಎ- 18/ಇಸಿ-9243 ರ ಸ್ಟಾರ್ ಸಿಟಿ ಬೈಕಿಗೆ ಡಿಕ್ಕಿ ಪಡಿಸಿದ ಪರಿಣಾಮ

ಗಣೇಶ್ ಪ್ರಸಾದ ರವರು ಬೈಕಿನಿಂದ ಕೆಳಗೆ ಬಿದ್ದು ತಲೆಗೆ ಮತ್ತು ಮುಖಕ್ಕೆ ತೀವ್ರವಾಗಿ ಪೆಟ್ಟು ಬಿದ್ದು ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ಆದ್ದರಿಂದ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 304(ಎ)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ
1 ನೇ ಆರೋಪಿಃ-

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ

1 ನೇ ಆರೋಪಿಃ-

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ Sd/-

**(ದೀಪು ಎಂ.ಟಿ.)**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಡೂರು.